## 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ, ಬಸವನ ಬಾಗೇವಾಡಿ.

**ಸಿ.ಸಿ. 658/2018**

***ಪ್ರಾಸಃ 10***

***ಚಾಸಾಃ 18***

| | |
|---|---|
| **ಹೆಸರು** | ಸುರೇಶ ಗಡ್ಡಿ |
| **ತಂದೆಯ ಹೆಸರು** | ರಂಗಪ್ಪ |
| **ವಯಸ್ಸು** | 42 ವರ್ಷ |
| **ವೃತ್ತಿ** | ಪೋಲಿಸ್ ಇನ್ಸಪೇಕ್ಟರ್ ಎಚ್ ಎ ಎಲ್ ಪೋಲಿಸ್ ಠಾಣೆ ಬೆಂಗಳೂರು |
| **ವಿಳಾಸ** | ಬೆಂಗಳೂರು ನಗರ |

**ಸಾಕ್ಷಿಯನ್ನು ಇಂದು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 03.08.2026**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

1. ನಾನು ದಿಃ05.08.2016 ರಿಂದ 18.10.2017 ರವರೆಗೆ ಕೋಲಾರ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 27.08.2017 ರಂದು ಮಧ್ಯಾಹ್ನ 12.00 ಗಂಟೆಗೆ ನಾನು ಠಾಣಾ ಎಸ್.ಎಚ್.ಒ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಗಣಕೀಕೃತ ದೂರನ್ನು ನನ್ನ ಹಾಜರುಪಡಿಸಿದ್ದು, ಸದರಿ ಲಿಖಿತ ದೂರನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನೆ ನಂಬರ್ 114/2017 ರಂತೆ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗೆ ಕಳುಹಿಸಿರುತ್ತೇನೆ.

3. ಅದೇ ದಿನ ನಾನು ಚಾಸಾ-1 ರವರು ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ ಮಟ್ಟಿಹಾ ಕ್ರಾಸ್ ಹತ್ತಿರ ಮಧ್ಯಾಹ್ನ 03.00 ರಿಂದ 04.00 ಗಂಟೆಯವರೆಗೆ ಸ್ಥಳ ಮಹಜರ್ ನ್ನು ಜರುಗಿಸಿರುತ್ತೇನೆ. ದಿಃ 28.08.2017 ರಂದು ಚಾಸಾ-

1 ರವರು ಠಾಣೆಗೆ ಹಾಜರಾಗಿ ಪುನರ್ ಹೇಳಿಕೆಯನ್ನು ನೀಡಿರುತ್ತಾರೆ. ಅದೇ ದಿನ ಚಾಸಾ-4 ರಿಂದ 6 ರವರನ್ನು ನಾನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

4. ದಿಃ 29.08.2017 ರಂದು ಚಾಸಾ-7 ರಿಂದ 11 ರವರನ್ನು ನಾನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 30.08.2017 ರಂದು ಚಾಸಾ-16 ಮತ್ತು 17 ರವರನ್ನು ನಾನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 03.09.2017 ರಂದು ಚಾಸಾ-12 ರಿಂದ 15 ರವರನ್ನು ನಾನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಾನು ದಿಃ 05.10.2017 ರಂದು ಆರೋಪಿತರ ವಿರುದ್ದ ಸಾಕ್ಷ್ಯಾಧಾರಗಳು ಲಭ್ಯವಾದ ಕಾರಣ ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ದೋಷಾರೋಪಣ ಪಟ್ಟಿಯನ್ನು ಸಲ್ಲಿಸುವವರೆಗೂ ಆರೋಪಿತರೆಲ್ಲರೂ ತಲೆಮರಿಸಿಕೊಂಡಿದ್ದರು.

5. ಸಾಕ್ಷಿಯು ತಾವು ಸ್ವೀಕರಿಸುವ ದೂರನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-2 ಬಿ ಎಂದು ಗುರುತಿಲಸಾಯಿತು. ಸಾಕ್ಷಿಯು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ನಿಪಿ-5 ಎಂದು. ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಸದರಿಪಂಚನಾಮೆಯನ್ನು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ 9,20,27,31 ಮತ್ತು 36 ನೇ ಆರೋಪಿತರ ಪರವಾಗಿ ಮಾನ್ಯ ಶ್ರೀ ಪಿ.ಎಮ್, ಕೆ . ವಕೀಲರಿಂದಃ**

1. ದಿಃ 27.08.2017 ರಂದು ನಾನೇ ಚಾಸಾ-1 ರವರಿಂದ ದೂರನ್ನು ಪಡೆದಿರುತ್ತೇನೆ. ನಾನು ನಿಪಿ-2 ರ ದೂರಿನಲ್ಲಿ ನನ್ನ ಹುದ್ದೆಯ ಶೀಲ್ ನ್ನು ಹಾಕಿರುವುದಿಲ್ಲ ಆದರೆ ನಾನು ಕೈಯಿಂದ ನನ್ನ ಹುದ್ದೆಯನ್ನು ಬರೆದಿರುತ್ತೇನೆ. ನಾನು ದಿಃ 27.08.2017 ರಂದು ಮಧ್ಯಾಹ್ನ 03.00 ರಿಂದ 04.00 ಗಂಟೆಯವರೆಗೆ ಸ್ಥಳ ಮಹಜರ್ ನ್ನು ಜರುಗಿಸಿರುತ್ತೇನೆ. ನಾನು ಸ್ಥಳ ಮಹಜರ್ ಜರುಗಿಸುವ ಪೂರ್ವದಲ್ಲಿ ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿ. ನಾನು ಚಾಸಾ-1 ರವರನ್ನು ಈ ಘಟನೆಯ ಕುರಿತು ವಿಚಾರಿಸಿದಾಗ ಆರೋಪಿತರು ಸಾರ್ವಜನಿಕರಿಗೆ ತೊಂದರೆಯಾಗುವಂತೆ ರಸ್ತೆಯಲ್ಲಿ ಕಟ್ಟೆ ನಿರ್ಮಾಣ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ.

2. ಆರೋಪಿತರು ರಸ್ತೆಯಲ್ಲಿ ಕಟ್ಟೆಯನ್ನು ನಿರ್ಮಾಣ ಮಾಡಿದ್ದಾರೆಂದು ಹೇಳುವ ಕುರಿತು ನಾನು ವಿಚಾರಣೆ ಮಾಡಿಲ್ಲ ಎಂದರೆ ಸಾಕ್ಷಿಯು ನನಗೆ ಚಾಸಾ-1 ರವರು ಮತ್ತು ಸಾಕ್ಷಿದಾರರು ಹೇಳಿರುವುದರಿಂದ ಗೊತ್ತು ಎಂದು ಹೇಳುತ್ತಾರೆ. ನಾನು ಮಹಜರ್ ಗೆ ಹೋದಾಗ ಘಟನಾ ಸ್ಥಳದಲ್ಲಿ ಘಟನೆಗೆ ಸಂಬಂಧಿಸಿದಂತೆ ಯಾವುದೇ ಕುರುಹುಗಳು ಇರಲಿಲ್ಲ. ಸಾಕ್ಷಿಯು ಮುಂದುವರೆದು ನಾನು ಹೋಗುವ ಪೂರ್ವದಲ್ಲಿ ಸದರಿ ಕಟ್ಟೆಯನ್ನು ತೆರವುಗೊಳಿಸಿದ್ದರು ಎಂದು ಹೇಳುತ್ತಾರೆ. ನಾನು ಪಂಚನಾಮೆಯ ಕಾಲಕ್ಕೆ ಘಟನೆಗೆ ಸಂಬಧಿಸಿದಂತೆ ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ.

3. ನಾನು ಘಟನಾ ಸ್ಥಳಕ್ಕೆ ಮಹಜರ್ ಗೆ ಹೋಗಿರುವುದನ್ನು ಹೊರತು ಪಡಿಸಿ ಬೇರೆ ಯಾವತ್ತೂ ಕೂಡಾ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-16 ಮತ್ತು 17 ರವರ ಹೇಳಿಕೆಗಳನ್ನು ಮಟ್ಟಿಹಾಳ ಕ್ರಾಸ್ ನಲ್ಲಿ ಪಡೆದಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಘಟನಾ ಸ್ಥಳದಲ್ಲಿ ಪಂಚರ ಸಮಕ್ಷಮದಲ್ಲಿ ನಿಪಿ-1 ರಂತೆ ಯಾವುದೇ ಸ್ಥಳ ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಕೂಡಾ ಚಾಸಾ-1 ಮತ್ತು ಇತರೇ ಸಾಕ್ಷಿದಾರರು ಸಾರ್ವಜನಿಕ ಸರ್ಕಾರಿ ಅಧಿಕಾರಿಗಳಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಆರೋಪಿತರ ವಿರುದ್ದ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:- 9, 20, 27, 31, 36 ನೇ ಆರೋಪಿ ಪರ ವಕೀಲರು ಮಾಡಿರುವ ಪಾಟಿ ಸವಾಲನ್ನು ಉಳಿದ ಆರೋಪಿತರ ಪರ ವಕೀಲರು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ವಿಡಿಯೋ ಕಾನ್ಫರೇನ್ಸ ಮುಖಾಂತರ ಸಂಜೆ 04.00 ರಿಂದ 4.30 ಗಂಟೆಯವರೆಗೆ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ಬಸವನ ಬಾಗೇವಾಡಿ.**